ಹಳ್ಳಿ ಗ್ರಾಮಕ್ಕೆ ದೀಪ ಕೊಡುವುದು ಎಷ್ಟು ಅವಶ್ಯಕವೆಂದು ಗೊತ್ತಿದೆ. ನಾನು ಸ್ವತಃ ಹೋಗಿ ನೋಡಿದ್ದೇನೆ. ಆದಷ್ಟು ಬೇಗ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಈಗಾಗಲೇ ಎರಡು ವರ್ಷವಾಗಿದೆ. ಅಲ್ಲಿ ಮುಳುಗಡೆ ರೈತರಿದ್ದಾರೆ. ರಸ್ತೆ ಇದೆ. ಒಂದು ತಂತಿ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರೂ ಪರವಾನಗಿ ಕೊಡಲಿಲ್ಲ. ಈ ಕೆಲಸವನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಜೆ. ಹೆಚ್. ಪಟೀಲ್.—ಆದಷ್ಟು ಬೇಗ ಎಂದು ಕನ್ನಡದಲ್ಲಿ ಹೇಳಿದ್ದೇನೆ.

ಶ್ರೀ ಬಿ. ಸ್ವಾಮಿರಾವ್.—ಆದಷ್ಟು ಬೇಗ ಎನ್ನುವುದಕ್ಕೆ ಅರ್ಥವೇ ಇಲ್ಲ. ಎಲ್ಲಾ ಪ್ರಶ್ನೆಗಳಿಗೂ ಆದಷ್ಟು ಬೇಗ ಎಂದು ಹೇಳಿದರೆ ಅದಕ್ಕೆ ಅರ್ಥವಿಲ್ಲ.

ಅಧ್ಯಕ್ಷರು.—ತಾವು ಭರವಸೆಗಳ ಸಮಿತಿಯ ಸದಸ್ಯರಿದ್ದೀರಿ. ಎಂಟು ದಿವಸಕ್ಕೊಮ್ಮೆ ಮೀಟಿಂಗ್ ಕರೆದು ಯಾವ್ಯಾವ ಭರವಸೆಗಳು ಪೆಂಡಿಂಗ್ ಇದೆ ಎಂದು ವಿಚಾರಿಸಿ.

ಈಗ ಶ್ರೀ ಪ್ರತಾಪ ಚಂದ್ರಶೆಟ್ಟಿಯವರ ಪ್ರಶ್ನೆಯನ್ನು ಶ್ರೀ ಬಿ.ಎಂ. ಇದ್ದಿನಬ್ಬನವರು ಕೇಳಬಹುದು.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಬಗ್ಗೆ

೧೯೬೫. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಬಂದರು ಹಾಗೂ ಮೀನುಗಾರಿಕೆ ಮತ್ತು ಸಣ್ಣ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಕರಕುಶಲ ಅಭಿವೃದ್ಧಿ ನಿಗಮವು ವಿದೇಶಿ ನೆರವಿನೊಂದಿಗೆ ಎಷ್ಟು ಯೋಜನೆಗಳನ್ನು ಕೈಗೊಂಡಿದೆ (ಇದಕ್ಕಾಗಿ ವೆಚ್ಚ ಮಾಡಿದ ಹಣ ಹಾಗೂ ಯೋಜನೆಯ ವಿವರಗಳನ್ನು ಒಜನೆಸುವುದು)

ಆ) ಯೋಜನೆಯ ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಕುಶಲಕರ್ಮಿಗಳಿಗೆ ಸಮರ್ಪಕವಾಗಿ ಕಚ್ಚಾ ವಸ್ತುಗಳು ದೊರೆಯುವ ವಿಷಯದಲ್ಲಿ ಮಾಡಲಾಗಿದೆಯೇ ?

ಇ) ಈ ಯೋಜನೆಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಎಷ್ಟು ಆರ್ಥಿಕ ಅವ್ಯವಹಾರದ ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿದೆ ?

ಶ್ರೀ ಎಂ ರಘುಪತಿ (ಬಂದರು ಹಾಗೂ ಮೀನುಗಾರಿಕೆ ಮತ್ತು ಸಣ್ಣ ಕೈಗಾರಿಕೆ ಸಚಿವರು).—

ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ವಿದೇಶಿ ನೆರವಿನೊಂದಿಗೆ ಎರಡು ಯೋಜನೆಗಳನ್ನು ಕೈಗೊಂಡಿದೆ. ಅವು ಡಚ್ ಯೋಜನೆ ಮತ್ತು ನೊರಾಡ್ ಯೋಜನೆ. ಇದಕ್ಕಾಗಿ ವೆಚ್ಚ ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

	ಲಕ್ಷ ರೂ. ಗಳಲ್ಲಿ
ಡಚ್ ಯೋಜನೆ	೧೯೯.೪೮
ನೊರಾಡ್ ಯೋಜನೆ	೨.೨೫

ಡಚ್ ಯೋಜನೆಯಡಿಯಲ್ಲಿ ೩೮೦ ವಾಸದ ಮನೆ ಹಾಗೂ ೪ ಕಾರ್ಯಾಗಾರಗಳನ್ನು ಕಟ್ಟಿದೆ ನೊರಾಡ್ ಯೋಜನೆಯಡಿಯಲ್ಲಿ ೫ ತರಬೇತಿಯ ಕೇಂದ್ರಗಳನ್ನು ಸ್ಥಾಪಿಸಿದೆ.

ಆ) ಹೌದು

ಇ) ಯಾವುದೂ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಡಚ್ ಯೋಜನೆಯಡಿಯಲ್ಲಿ ೩೮೦ ವಾಸದ ಮನೆ ಹಾಗೂ ೪ ಕಾರ್ಯಾಗಾರಗಳನ್ನು ಕಟ್ಟಿದೆ. ನೊರಾಡ್ ಯೋಜನೆಯಡಿಯಲ್ಲಿ ೫ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದೆ.

ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ತರಬೇತಿ ಕೇಂದ್ರದಲ್ಲಿ ಎಷ್ಟು ಜನರಿಗೆ ಕೆಲಸ ಸಿಗುತ್ತದೆ. ಮತ್ತು ಈ ಕಾರ್ಯಾಗಾರದಿಂದ ಎಷ್ಟು ಜನರಿಗೆ ಉಪಕಾರವಾಗುತ್ತದೆ, ೩೮೦ ವಾಸದ ಮನೆಗಳನ್ನು ಏನು ಮಾಡಲಾಗಿದೆ.

ಶ್ರೀ ಎಂ. ರಘುಪತಿ.—೩೮೦ ವಾಸದ ಮನೆಯ ಪೈಕಿ ೩೬೪ ಮನೆಗಳನ್ನು ಆಗಲೇ ಅವರಿಗೆ ಕೊಟ್ಟಿದ್ದೇವೆ. ಯಾರು ಅಲ್ಲಿ ವಾಸ ಮಾಡಬೇಕಾಗಿರುತ್ತದೋ ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ. ಇನ್ನು ೧೪ ಜನಗಳಿಗೆ ಹಕ್ಕು ಪತ್ರಗಳನ್ನು ಕೊಟ್ಟಿದ್ದೇವೆ ಮತ್ತು ಆ ಮನೆಗಳನ್ನು ಉಪಯೋಗಿಸಬೇಕೆಂದು ಕೂಡ ಹೇಳಿದ್ದೇವೆ. ಎಷ್ಟು ಜನ ಲಾಭ ಪಡೆಯುತ್ತಾರೆ ಎಂಬ ಬಗ್ಗೆ ವಿವರವನ್ನು ಕೇಳಿದ್ದಾರೆ, ಅದರ ಅಂಕಿ ಅಂಶ ನನ್ನ ಹತ್ತಿರ ಇಲ್ಲ ಕಳಿಸಿ ಕೊಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ರಾಜ್ಯ ಕರಕುಶಲ ನಿಗಮ ಲಾಭದಲ್ಲಿದೆಯೋ ಇಲ್ಲವೇ ನಷ್ಟದಲ್ಲಿದೆಯೋ ?

ಶ್ರೀ ಎಂ. ರಘುಪತಿ.—ಇತ್ತೀಚೆಗೆ ಲಾಭ ಗಳಿಸುತ್ತಿದೆ

ರಾಜ್ಯ ರೇಷ್ಮೆ ರಫ್ತು ಬಗ್ಗೆ

೧೪೩೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲುಗಳಲ್ಲಿ ಕರ್ನಾಟಕದ ರೇಷ್ಮೆ ವಿನಿಮಯ ಕೇಂದ್ರದ ವ್ಯಾಪಾರದ ಒಟ್ಟು ವೆಚ್ಚ ?

ಆ) ರಾಜ್ಯ ಸರ್ಕಾರದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಿಸುತ್ತಿದೆಯೆ ?

ಇ) ಕರ್ನಾಟಕದಿಂದ ಆಗುವ ರೇಷ್ಮೆ ರಫ್ತಿನಿಂದ ಕರ್ನಾಟಕಕ್ಕೆ ಮತ್ತು ಇಂಡಿಯಾಕ್ಕೆ ಪ್ರಾಪ್ತವಾದ ರಫ್ತುಗಳಿಗೆ ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಸಚಿವರು).—

ಅ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲುಗಳಲ್ಲಿ ಕರ್ನಾಟಕ ರೇಷ್ಮೆ ವಿನಿಮಯ ಕೇಂದ್ರದ ವ್ಯಾಪಾರದ ಒಟ್ಟುವೆಚ್ಚವನ್ನು ಕೆಳಗೆ ನಮೂದಿಸಲಾಗಿದೆ

ವರ್ಷ	ಪರಿಮಾಣ (ಮೆ. ಟನ್ನುಗಳಲ್ಲಿ	ಮೌಲ್ಯ (ಕೋಟಿ ರೂಪಾಯಿಗಳಲ್ಲಿ)
೧೯೮೬-೮೭	೨೮೮೮	೧೨೯.೩೭
೧೯೮೭-೮೮	೨೯೮೩	೧೫೮.೩೯

ಆ) ಹೌದು, ರೇಷ್ಮೆ ಜವಳಿಗೆ ಸಂಬಂಧಿಸಿದಂತೆ ಸ್ಪರ್ಧಿಸುತ್ತದೆ.

ಇ) ಕರ್ನಾಟಕದಿಂದ ಆಗುವ ರೇಷ್ಮೆ ಜವಳಿಯ ರಫ್ತಿನಿಂದ ಕರ್ನಾಟಕ ಮತ್ತು ಇಂಡಿಯಾಕ್ಕೆ ಪ್ರಾಪ್ತವಾದ ರಫ್ತುಗಳಿಗೆ ಹಣದ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಇಂಡಿಯಾ	ಕರ್ನಾಟಕ
೧೯೮೬-೮೭	೨೧೧.೬೯	೨೪.೯೪
೧೯೮೭-೮೮	೨೫೪.೯೬	೩೫.೦೨